ಕರ್ನಾಟಕ ಸರ್ಕಾರ                                                  ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.527/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಬೋಜನಗೌಡ** | | |
| **ತಂದೆ:ಹೆಸರು** | **ವಿರುಪನಗೌಡ** | **ಪಿಡಬ್ಲೂ:** | **2** |
| **ವಯಸ್ಸು** | **60 ವರ್ಷ** | **ಸಿಡಬ್ಲೂ:** | **4** |
| **ಉದ್ಯೋಗ:** | **ವ್ಯವಸಾಯ** | | |
| **ವಾಸ ಸ್ಥಳ:** | **ಕೊಟ್ನೇಕಲ್ ಬೋಗಾವತಿ ಗ್ರಾಮ.** | | |

**ದಿನಾಂಕ 01-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ 2 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ನನ್ನ ಸೊಸೆ. ಚಾಸಾ-2, 3, 5 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ದಿ.11-01-2023 ರಂದು ನಾನು, ಚಾಸಾ-1, 5 ರವರು ಸಂ.5-30 ರ ಸುಮಾರಿಗೆ ಚಾಸಾ-1 ರವರ ಜಮೀನು ಸರ್ವೆ ನಂ.81 ರಲ್ಲಿ ಕೆಲಸ ಮಾಡುತ್ತಿದ್ದಾಗ, ಅಲ್ಲಿಗೆ 1 ನೇ ಆರೋಪಿಯು ಹೊಲದೊಳಗೆ ಪ್ರವೇಶ ಮಾಡಿ, ಈ ಹೊಲಕ್ಕೆ ನೀನು ಬರಬೇಡ ಎಂದು ಹೇಳಿರುತ್ತಾನೆ ನಂತರ ಹೊಡೆದಿರುತ್ತಾನೆ. ಆಗ ನಾನು & ಚಾಸಾ-5 ರವರು ಜಗಳ ಬಿಡಿಸಿರುತ್ತೇವೆ. ಆಗ ಆರೋಪಿಯು ಇನ್ನೊಂದು ಸಾರಿ ಈ ಹೊಲಕ್ಕೆ ಬಂದರೆ ನಿಮ್ಮನ್ನು ಜೀವಂತ ಬಿಡುವುದಿಲ್ಲ, ಕೊಂದು ಹಾಕುತ್ತೇನೆಂದು ಜೀವದ ಬೆದರಿಕೆ ಹಾಕಿದ್ದನು. ಸದರಿ ವಿಷಯವಾಗಿ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ಅವಾಚ್ಯ ಶಬ್ದಗಳಿಂದ ಆರೋಪಿ ಬೈದಿದ್ದರು ಎಂದರೆ ಸರಿ. ಈ ಹೊಲ ನನಗೆ ಸೇರಿದೆ ಎಂದು ಬೈದು, ಕೂದಲು, ಸೀರೆ ಹಿಡಿದು ಎಳೆದಾಡಿ, ಬೈದು ಬೆದರಿಕೆ ಹಾಕಿದ್ದರು ಎಂದರೆ ಸರಿ. 1 ನೇ ಆರೋಪಿಗೆ 2 ನೇ ಆರೋಪಿ ಪ್ರಚೋದನೆ ಮಾಡಿದ್ದರು ಎಂದರೆ ಸಾಕ್ಷಿಯು ಮಾಡಿರಬಹುದು ಎನ್ನುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ನಮ್ಮದು ಬೋಗಾವತಿ ಗ್ರಾಮ. ಬೋಗಾವತಿಯಿಂದ ಸಿಂಧನೂರಿಗೆ 35 ಕಿ.ಮೀ. ಅಂತರ ಇದೆ. ಇಲ್ಲಿಂದ ತಿಪ್ಪನಹಟ್ಟಿ ಗ್ರಾಮಕ್ಕೆ 18 ಕಿ.ಮೀ. ಅಂತರ ಇದೆ ಎಂದರೆ ಸರಿ.

2. ಚಾಸಾ-1 ರವರು ತವರು ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ.

3. ನಾನು ನನ್ನ ಹೇಳಿಕೆಯನ್ನು ಠಾಣೆಯಲ್ಲಿ ದಿ.18-01-2023 ರಂದು ಅಂದರೆ ಒಂದು ವಾರದ ನಂತರ ಕೊಟ್ಟಿದ್ದೆನು. ತಿಪ್ಪನಹಟ್ಟಿಯಲ್ಲಿ ನಾನು 19 ನೇ ತಾರೀಖಿನಂದು ಯಾವುದೇ ಹೇಳಿಕೆ ಕೊಟ್ಟಿಲ್ಲ, ಪೋಲೀಸರನ್ನು ಆ ದಿನ ನಾನು ಭೇಟಿಯಾಗಿರುವುದಿಲ್ಲ. ತಿಪ್ಪನಹಟ್ಟಿಕಡೆಯಿಂದ ಹೊಲ 1 ಕಿ.ಮೀ. ಅಂತರದಲ್ಲಿ ಪೂರ್ವಕ್ಕೆ ಇದೆ.

4. ಜಗಳ ಸರ್ವೆ ನಂ.81/2 ರಲ್ಲಿ ಆಗಿತ್ತು. ಜಗಳವು ಸದರಿ ಹೊಲದ ದಕ್ಷಿಣಕ್ಕೆ ಆಗಿತ್ತು. ಸದರಿ ಜಮೀನಿನಲ್ಲಿ 2 ಜಮೀನುಗಳು ಇದ್ದವು. ಆ ಮನೆಯ ಪಶ್ಚಿಮ & ಪೂರ್ವಕ್ಕೆ ದಾರಿಗಳಿವೆ. ನೀವು ಹೇಳುವಂತೆ ಆ ದಾರಿ ಇಲ್ಲ, ನೀವು ಹೊಲಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

5. ಸದರಿ ಜಮೀನು ಆ ಕಾಲಕ್ಕೆ ಒಣಭೂಮಿ ಇತ್ತು, ಟಿಲ್ಲರ್ ಹೊಡೆಯುತ್ತಿದ್ದರು. ನೀರು ನಿಂತರೆ ಟಿಲ್ಲರ್ ಹೊಡೆಯಲು ಬರುವುದಿಲ್ಲ ಎಂದರೆ ಸರಿ. ಆ ದಿನ ಟ್ರಾಕ್ಟರ್ ಇತ್ತು, ಪಟ್ಲರ್ ಹೊಡೆಯುತ್ತಿದ್ದರು. ನನ್ನ ಹೇಳಿಕೆಯಲ್ಲಿ ನಾನು ಟ್ರಾಕ್ಟರ್ ಬಗ್ಗೆ ಹೇಳಿರುವುದಿಲ್ಲ. ನೀನು ಸಹಾಯ ಮಾಡಲು ಬಾ ಎಂದು ನನ್ನನ್ನು ಕರೆದಿದ್ದರು.

6. ಚಾಸಾ-5 ರವರದ್ದು ಕಾರಟಗಿ ತಾಲ್ಲೂಕಿನ ಗೂಡೂರು ಗ್ರಾಮ. ಘಟನಾ ಸ್ಥಳದಿಂದ ಸದರಿ ಊರು 50 ಕಿ.ಮೀ. ನಷ್ಟು ಅಂತರ ಇದೆ. ನಾನು ಒಂದೇ ಸಲ ಅವರ ಹೊಲಕ್ಕೆ ಹೋಗಿದ್ದೆ.

7. ತಿಪ್ಪನಹಟ್ಟಿ ಗ್ರಾಮದಲ್ಲಿ ಚಾಸಾ-1 ರವರ ಸಂಬಂಧಿಕರು ಊರ ತುಂಬಾ ಇದ್ದಾರೆ ಎಂದರೆ ಸರಿ. ಅವರ ಸಂಬಂಧಿಕರ ಒಟ್ಟು 30 ಮನೆಗಳಿವೆ ಎಂದರೆ ಸಾಕ್ಷಿಯು 25 ಎನ್ನುತ್ತಾರೆ. ಆ ದಿನ ಚಾಸಾ-1 ರವರೊಂದಿಗೆ ಅವರ ಸಂಬಂಧಿಕರು ಸ್ಥಳಕ್ಕೆ ಬಂದಿರಲಿಲ್ಲ.

8. ಚಾಸಾ-1 ರವರು ಕಾರಟಗಿಯಲ್ಲಿ & ಇನ್ನಿತರೆ ಠಾಣೆಯಲ್ಲಿ 3-4 ಕೇಸುಗಳನ್ನು ಮಾಡಿದ್ದಾರೆ.

9. ಚಾಸಾ-1 ರವರು ಆರೋಪಿಯ ಮೇಲೆ ಜೀವನಾಂಶ ಕೋರಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ.

10. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹೊಲಕ್ಕೆ ಬೆಳಿಗ್ಗೆ ಹೋಗುತ್ತಾರೆ, ಸಂಜೆ ವೇಳೆ ಹೋಗುವುದಿಲ್ಲ ಎಂದರೆ ಸರಿಯಲ್ಲ.

11. ಆರೋಪಿ ಊರಿನೊಳಗಿನಿಂದ ಬಂದಿದ್ದನು. ಆತ ಮೋ.ಸೈ. ತಂದಿದ್ದ. ಚಾಸಾ-1 ತನ್ನ ಸ್ಕೂಟಿ ತೆಗೆದುಕೊಂಡು ಬಂದಿದ್ದಳು. ನಾನು ಮೋ.ಸೈ. ತೆಗೆದುಕೊಂಡು ಬಂದಿದ್ದೆನು. ನಾನು & ಚಾಸಾ-1 ರವರು ಸಿಂಧನೂರಿನಿಂದ ಒಟ್ಟಿಗೆ ಹೋಗಿದ್ದೆವು. ನಾವು ಹೋದ ನಂತರ ಟ್ರಾಕ್ಟರ್ ಕರೆಸಿದ್ದೆವು.

12. 1 ತಾಸಿನಲ್ಲಿ 1 ಎಕರೆಯನ್ನು ಟಿಲ್ಲರ್ ಹೊಡೆಯಬಹುದು ಎಂದರೆ ಅರ್ಧ ಗಂಟೆಯಲ್ಲಿ ಮುಗಿಯುತ್ತದೆ, ಹಸೆ ಇದ್ದಿದ್ದಿದ್ದರಿಂದ 3-4 ಸಾರಿ ಹೊಡೆಸಿದ್ದೆವು. ಟ್ರಾಕ್ಟರ್ ಚಾಲಕ ಇದ್ದನು. ಆತ ಹೊರಗೆ ಹೋದ ನಂತರ ಆರೋಪಿ ಬಂದು ಜಗಳ ಮಾಡಿದ್ದರು. ಆಗ ನಾನು ಮೂಲೆ ಮೂಲೆ ಸಾಫ್ ಮಾಡುತ್ತಿದ್ದೆನು.

13. ನಾವು ಹೋದ ಮೇಲೆ ಜಗಳವಾಗಿತ್ತು. ನೀವು ಬನ್ನಿ ಎಂದು ಕರೆದಿದ್ದರು, ಆದ್ದರಿಂದ ನಾನು ಹೋಗಿದ್ದೆ. ಜಗಳವು 5-10 ನಿಮಿಷಗಳವರೆಗೆ ಆಗಿತ್ತು. ಜಗಳವು ಪಶ್ಚಿಮದಿಂದ ಪೂರ್ವಕ್ಕೆ ಹೋಗುವ ದಾರಿಯಲ್ಲಿ ಆಗಿತ್ತು. ಅಂದರೆ ದಾರಿಯಲ್ಲಿ ಜಗಳವಾಗಿತ್ತು ಎಂದರೆ ಸಾಕ್ಷಿಯು ದಾರಿಯ ಪಕ್ಕದಲ್ಲಿದ್ದ ಒಡ್ಡಿನ ಮೇಲೆ ಜಗಳವಾಗಿತ್ತು.

14. ಹೊಲದಲ್ಲಿ ಜಗಳವಾಗಿಲ್ಲ. ಸಾಕ್ಷಿಗೆ ಕಡತದಲ್ಲಿರುವ ನಕ್ಷೆಯನ್ನು ತೋರಿಸಿ, ಸಾಕ್ಷಿಯು ಅದನ್ನು ನೋಡಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಹೊಲದಲ್ಲಿ ಜಗಳವಾಗಿದೆ ಎಂದು ಬರೆದಿದೆ ಎಂದರೆ ಸಾಕ್ಷಿಯು ದಾರಿ & ಮಡಿ ಎರಡೂ ಒಂದೇ ಎನ್ನುತ್ತಾರೆ. ದಾರಿಯಲ್ಲಿ & ಹೊಲದಲ್ಲಿ ಎರಡೂ ಕಡೆ ಎಳೆದಾಡಿದ್ದರು, ಜಗಳವೆಂದರೆ ಒಂದೇ ಕಡೆ ನಿಂತು ಆಡುತ್ತಾರೆಯೇ ಎನ್ನುತ್ತಾರೆ. ಜಗಳ ಹೊಲದ ಪಕ್ಕದ ದಾರಿಯಲ್ಲಿ ಆಗಿತ್ತು.

15. ನಂತರ ಅವರವರ ಊರಿಗೆ ಅವರವರು ಹೋಗಿದ್ದರು. ಮುಂದೆ ಒಂದು ದಿನ ನನ್ನನ್ನು ಕಾರಟಗಿಗೆ ಕರೆಸಿದ್ದರು. ಕೇಸು ಮಾಡಬೇಕೋ ಬೇಡವೋ ಎಂಬ ಬಗ್ಗೆ ಕಾರಟಗಿಯಲ್ಲಿ ಮಾತು ಕತೆ ಆಗಿತ್ತು ಎಂದರೆ ಸರಿ.

16. ಚಾಸಾ-1 ರವರು ದೂರು ಕೊಡಲು ಹೋದಾಗ ನಾನೂ ಸಹ ಠಾಣೆಗೆ ಹೋಗಿದ್ದೆ. ಠಾಣೆಗೆ ನನ್ನೊಂದಿಗೆ ಚಾಸಾ-5 ರವರೂ ಸಹ ಬಂದಿದ್ದರು. ದೂರು ಕೊಡುವಾಗ ನಾನು ಇದ್ದೆ.

17. ದೂರನ್ನು ಬಳಗನೂರಿನಲ್ಲಿ ಗಣಕೀಕೃತ ಮಾಡಿಸಿದ್ದರು. ಕಾರಟಗಿಯಲ್ಲಿ ಗಣಕೀಕೃತ ಮಾಡಿಸಿಲ್ಲ ಎಂದರೆ ಸರಿ. ದೂರಿನಲ್ಲಿ ಕಾರಟಗಿ ಎಂದು ಬರೆದಿದೆ ಎಂದರೆ ಸರಿ. ಕಾರಟಗಿಯಲ್ಲಿ ಗಣಕೀಕರಿಸಿರಬಹುದು, ನನಗೆ ಗೊತ್ತಿಲ್ಲ ಎನ್ನುತ್ತಾರೆ. ದೂರನ್ನು ಯಾರು ಹೇಳಿ ಬರೆಸಿದ್ದಾರೆಂದು ನನಗೆ ಗೊತ್ತಿಲ್ಲ. ಚಾಸಾ-1 ರವರು ಆರೋಪಿಗೆ ಹಿಂಸೆಕೊಡಬೇಕೆಂದು 3-4 ಕೇಸ್ ಮಾಡಿದ್ದಾರೆ ಎಂದರೆ ಸರಿ.

18. ಆರೋಪಿಯ ತಾಯಿಗೆ ಓಡಾಡಲು ಬರುವುದಿಲ್ಲ, ತುಂಬಾ ವಯಸ್ಸಾಗಿದೆ ಎಂದರೆ ಸರಿ.

19. ಚಾಸಾ-1 ರವರು ಆರೋಪಿಗೆ ನೀನು ಬೇರೆ ಮನೆ ಮಾಡಿ, ನಿನ್ನ ತಾಯಿಯೊಂದಿಗೆ ಇರಲು ಆಗುವುದಿಲ್ಲ ಎಂದು ಕಿರುಕುಳ ಕೊಡುತ್ತಿದ್ದಳು, 2 ನೇ ಆರೋಪಿಗೆ 1 ನೇ ಆರೋಪಿ ಮಾತ್ರ ಮಗ ಎಂದರೆ ಸಾಕ್ಷಿಯು ಇಬ್ಬರು ಮಕ್ಕಳು ಇದ್ದಾರೆ ಎನ್ನುತ್ತಾರೆ. ಆರೋಪಿಯ ಮನೆಯಲ್ಲಿ ಇರಲು ಚಾಸಾ-1 ರವರಿಗೆ ಇಷ್ಟವಿಲ್ಲ ಎಂದರೆ ಸಾಕ್ಷಿಯು ತೋರಣಗಲ್‌ನಲ್ಲಿ ತುಂಬಾ ಧೂಳು ಇರುವುದರಿಂದ ಆಕೆಗೆ ಇಷ್ಟವಿಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ವೈದ್ಯರು ಅಲರ್ಜಿಯ ಬಗ್ಗೆ ಮಕ್ಕಳ ಚೀಟಿಯಲ್ಲಿ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ಅದೇ ಊರಿನಲ್ಲಿ ಆರೋಪಿತರೂ ಸಹ ಇದ್ದಾರೆ, ಅವರಿಗೆ ಯಾವುದೇ ತೊಂದರೆ ಆಗಿಲ್ಲ ಎಂದರೆ ಸರಿ.

20. ಚಾಸಾ-1 ರವರಿಗೆ ಅವರ ತಂದೆ ಹೊಲ ಕೊಟ್ಟಿರುತ್ತಾರೆ ಎಂದರೆ ಸರಿ. ಆದ್ದರಿಂದ ಆಕೆ ತಾನು ಶ್ರೀಮಂತಳಿದ್ದಾಳೆ ಎಂದು 1 ನೇ ಆರೋಪಿಯೊಂದಿಗೆ ಜೀವನ ಮಾಡಲು ಹೋಗುತ್ತಿಲ್ಲ ಎಂದರೆ ಸರಿಯಲ್ಲ.

21. ಈ ರೀತಿ ಕೇಸು ಮಾಡಿದರೆ ಆತ ಬಗ್ಗುತ್ತಾನೆಂದು ಈ ಕೇಸು ಮಾಡಿದ್ದಾಳೆ ಎಂದರೆ ಸಾಕ್ಷಿಯು ಕಾರಣ ಇರಬಹುದೇನೋ ಎನ್ನುತ್ತಾರೆ. 1 ನೇ ಆರೋಪಿ ಈಗಲೂ ಆಕೆಯನ್ನು ಕರೆದುಕೊಂಡು ಹೋಗಲು ತಯಾರಿದ್ದಾನೆ, ಚಾಸಾ-1 ರವರೇ ತಯಾರಿಲ್ಲ ಎಂದರೆ ಸರಿಯಲ್ಲ.

22. ನೀವು ಹೇಳಿದಂತೆ ಯಾವುದೇ ಜಗಳವಾಗಿಲ್ಲ, ಚಾಸಾ-1 ರವರ ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದು, ಜೀವದ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

23. ಜಗಳ ಆಗಿದ್ದು ಸಾರ್ವಜನಿಕ ರಸ್ತೆಯಲ್ಲಿ.

24. ಜಗಳದಲ್ಲಿ ಕೂದಲು ಹಿಡಿದು ಎಳೆದಾಗ ಕೂದಲು ಕಿತ್ತಿರಲಿಲ್ಲ & ಸೀರೆ ಹರಿದಿರಲಿಲ್ಲ. ನೀವು ಈ ದಿನ ನ್ಯಾಯಾಲಯದ ಮುಂದೆ ಹೇಳಿದ ಎಲ್ಲಾ ವಿಷಯಗಳು ಸುಳ್ಳು, ನೀವು ಆಕೆಯ ಮಾವ ಇರುವುದರಿಂದ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**